ದಿನಾಂಕ:

ಗೆ:

ಸಚಿವರು,

ಕರ್ನಾಟಕ ರಾಜ್ಯ

ಮಾನ್ಯ

<u>ವಿಷಯ</u>: ಬೆಂಗಳೂರಿನ ಪ್ರಯಾಣಿಕ ರೈಲು ಸೇವೆಯ ತ್ವರಿತ ಅನುಷ್ಠಾನಕ್ಕಾಗಿ ಮನವಿ

ಬೆಂಗಳೂರು ಸುತ್ತಮುತ್ತಲಿನ ಪುರ, ಪಟ್ಟಣಗಳನ್ನು ಸಂಪರ್ಕಿಸುವ "ಪ್ರಯಾಣಿಕ ರೈಲು ಸೇವೆ"ಯ ಅನುಷ್ಠಾನದ ಬಗ್ಗೆ ನಿಮ್ಮ ಗಮನ ಸೆಳೆಯಬಯಸುತ್ತೇನೆ. ಇದು **ಕಾಂಗ್ರೇಸ್ ಪಕ್ಷದ ೨೦೧೩ರ ಕರ್ನಾಟಕ ವಿಧಾನಸಭೆ ಚುನಾವಣೆಯ ಪ್ರಾಣಾಳಿಕೆಯ**ಲ್ಲಿ ನೀಡಿದ್ದ ವಾಗ್ದಾನವೂ ಕೂಡ. ಈ ಕುರಿತಾಗಿ ನಾನು ಹಿಂದೆ ಬರೆದ ಪತ್ರಗಳಂತೆ ಕೆಳಕಂಡ ವಿಷಯಗಳನ್ನು ನಿಮ್ಮ ಗಮನಕ್ಕೆ ಮತ್ತು ಅನುಷ್ಠಾನಕ್ಕೆ ತರಲಿಚ್ಛಿಸುತ್ತೇನೆ.

ಮಾನ್ಯರೆ, ಬೆಂಗಳೂರು ಮತ್ತು ಸುತ್ತಮುತ್ತಲಿನ ಪಟ್ಟಣಗಳ ಇಂದಿನ ಸ್ಥಿತಿಗತಿಗಳ ಬಗ್ಗೆ ನಿಮಗೇ ತಿಳಿದಿವೆ. ಸಂಚಾರ ವ್ಯವಸ್ಥೆಯು ದಿನೇ ದಿನೇ ಹದಗೆಡುತ್ತಿದ್ದು, ಅದನ್ನು ನೀಗಿಸಲು ಬೆಂಗಳೂರಿಗೆ ಬಹು ಮಾದರಿ ಸಮೂಹ ಸಾರಿಗೆ ವ್ಯವಸ್ಥೆಯ ಅವಶ್ಯಕತೆ ಅಗತ್ಯ. **ಇದೀಗ ನಿರ್ಮಾಣವಾಗುತ್ತಿರುವ "ನಮ್ಮ ಮೆಟ್ರೊ" ಪ್ರಸ್ತುತ ಮತ್ತು ಮುಂದಿನ ಸಾರಿಗೆ ಅವಶ್ಯಕತೆಗಳನ್ನು ನೀಗಿಸಲು ಆಗದು.** ನಮ್ಮ ಮೆಟ್ರೋ' ಗಿಂತ ಹೆಚ್ಚಿನದು ಈ ನಗರಕ್ಕೆ ಅವಶ್ಯಕತೆಯಿದೆ.

ಜುಲೈ ೧೨, ೨೦೧೩ರಂದು, ಕರ್ನಾಟಕ ಸರ್ಕಾರವು "ಉಪನಗರ ರೈಲು ಸಂಚಾರ" ವ್ಯವಸ್ಥೆಗೆ ತಾತ್ವಿಕ ಒಪ್ಪಿಗೆ ನೀಡಿದೆ. ಈ ಕುರಿತಾಗಿ ಇಂದಿನವರೆವಿಗೂ ಹೆಚ್ಚಿನ ಪ್ರಗತಿ ಕಂಡಿಲ್ಲ. ೨೬ ವರ್ಷಗಳಿಂದ ನೆನಗುದಿಗೆ ಬಿದ್ದಿರುವ ಈ ಯೋಜನೆಯ ಚಾಲನೆ ಈಗ ತೆಗೆದುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಚುನಾವಣೆಗಳಿರುವುದರಿಂದ ಚುನಾವಣಾ ಆಯೋಗದ ನೀತಿ ಸಂಹಿತೆಯಂತೆ ಈ ಯೋಜನೆಯ ಅನುಷ್ಠಾನವನ್ನು ಮುಂದೂಡಬೇಕಾಗುತ್ತದೆ. ಈ ಯೋಜನೆಯನ್ನು ಸ್ವಯಂಚಾಲಿತ ಅನುಷ್ಠಾನದ ಮಾದರಿಯಲ್ಲಿ ಚಾಲನೆ ನೀಡುವುದರಿಂದ ಚುನಾವಣೆಯಿಂದ ಇದರ ಮೇಲೆ ಪರಿಣಾಮಗಳು ಆಗುವುದಿಲ್ಲ. 'ಪ್ರಯಾಣಿಕ ರೈಲು ಅನುಷ್ಠಾನದ ೨೦೧೨ರ ರೈಟ್ಸ್ ವರದಿ' ಯಂತೆ ರಾಜ್ಯ ಸರ್ಕಾರ ಮತ್ತು ರೈಲ್ವೆ ಮಂತ್ರಾಲಯಕ್ಕೆ ನಿಮ್ಮ ಪ್ರಭಾವ ಬೀರಬೇಕೆಂದು ವಿನಮ್ರನಾಗಿ ಕೇಳಿಕೊಳ್ಳುತ್ತಿದ್ದೇನೆ.

ಪ್ರಸ್ತಾವಿತ 'ಉಪನಗರ ರೈಲು ಸೇವೆ' ಯೋಜನೆಯು ಈಗಾಗಲೇ ಇರುವ ರೈಲು ಹಳಿಗಳಿಂದ ಬೆಂಗಳೂರನ್ನು ಸುತ್ತಮುತ್ತಲಿನ ಪಟ್ಟಣಗಳೊಂದಿಗೆ ಸಂಪರ್ಕಿಸುತ್ತದೆ. ಇದರಿಂದಾಗಿ ರಸ್ತೆಯ ಮೇಲಿನ ಒತ್ತಡ ಕಡಿಮೆಯಾಗಿ ಸಂಚಾರ ವ್ಯವಸ್ಥೆ ಸುಧಾರಿಸುತ್ತದೆ.

ಈ ಕುರಿತಾಗಿ ಈಗಾಗಲೇ ನಗರಾಭಿವೃದ್ಧಿ ಖಾತೆಯು 'ಭೂಸಾರಿಗೆ ಇಲಾಖೆ' ಯಿಂದ 'ತಾಂತ್ರಿಕ-ಸಾಧ್ಯತೆ' ಯ ವರದಿಯನ್ನು ರೈಟ್ಸ್ - ಭಾರತ ಸರ್ಕಾರದ ಉದ್ಯಮದಿಂದ ದೊರೆತ ವರದಿಯನ್ನು ಸದ್ಧಪಡಿಸಿದೆ ಎಂದು ತಿಳಿಸ ಬಯಸುತ್ತೇನೆ.

ನಿಮ್ಮ ಅನುಕೂಲಕ್ಕಾಗಿ ಈ ಯೋಜನೆಯ ರೂಪು-ರೇಷೆಗಳನ್ನು ಕೆಳಗೆ ನೀಡಿದ್ದೇನೆ.

# ಉಪನಗರ ರೈಲಿನಿಂದಾಗುವ ಉಪಯೋಗ ಮತ್ತು ಅದರ ರೂಪರೇಷೆಗಳು

೧. ಭೂಸಾರಿಗೆ ಇಲಾಖೆಗೆ (ಡಲ್ಟ್)ಗೆ ರೈಟ್ಸ್ ಸಲ್ಲಿಸಿದ ವರದಿಯು ಬೆಂಗಳೂರಿನಲ್ಲಿ ಉಪನಗರ ರೈಲು ಸೇವೆ ಅನುಷ್ಠಾನವನ್ನು ಕೂಡಲೇ ಮಾಡಬೇಕೆಂದು ಹೇಳಿದೆ. ಇದಕ್ಕೆ ಪುಷ್ಟಿ ನೀಡಲು ಕೆಳಕಂಡ ಅಂಶಗಳನ್ನು ಗಮನಿಸಿ:

ಅ. ಈಗಾಗಲೇ, ೧.೫ ಲಕ್ಷ ಪ್ರಯಾಣಿಕರು, ರೈಟ್ಸ್ ನಿರ್ಧರಿಸಿರುವ  ಪ್ರಯಾಣಿಕ ರೈಲು ಸೇವೆಯ ಮಾರ್ಗಗಳಲ್ಲಿ ದೂರದೂರುಗಳ ರೈಲುಗಳಲ್ಲಿ ಪ್ರತಿದಿನ ಸಂಚರಿಸುತ್ತಿದ್ದಾರೆ.

ಆ. ಪ್ರಯಾಣಿಕ ರೈಲು ಸಂಪೂರ್ಣವಾಗಿ ಅನುಷ್ಠಾನಗೊಂಡಾಗ ೨೦-೨೫ ಲಕ್ಷ ಪ್ರಯಾಣಿಕರು ಪ್ರತಿ ದಿನ ಸಂಚರಿಸಲಿದ್ದಾರೆ.

೨. ಪ್ರಯಾಣಿಕ ರೈಲು ಯೋಜನೆಯಲ್ಲಿನ ಹೂಡಿಕೆಯು ಬೆಂಗಳೂರು ಮತ್ತು ರಾಜ್ಯದ ಬೆಳವಣಿಗೆಗೆ ಸಹಕಾರಿಯಾಗಲಿದೆ.

ಅ. ಬೆಂಗಳೂರಿನ ಸುತ್ತಮುತ್ತಲಿನ ಪುರ, ಪಟ್ಟಣಗಳು ಈ ಸಂಪರ್ಕದಿಂದಾಗಿ ಆರ್ಥಿಕವಾಗಿ ಮತ್ತು ತಾಂತ್ರಿಕವಾಗಿ ಬೆಳೆಯಲು ಸಹಕಾರಿಯಾಗುತ್ತದೆ.

ಆ. ಸುತ್ತಮುತ್ತಲಿನ ಪುರ, ಪಟ್ಟಣಗಳು ಹೊಸ ಬೆಳವಣಿಗೆ ಕೇಂದ್ರಗಳಾಗಿ ರೂಪುಗೊಂಡು ಕಡಿಮೆ ಖರ್ಚಿನಲ್ಲಿ ಮನೆ, ಕಾರ್ಖಾನೆಗಳಿಗೆ ಭೂಮಿ ಮತ್ತು ಜನ ದೊರೆಯಲಿದ್ದಾರೆ.

ಇ. ಬೆಂಗಳೂರಿನ ಎಲ್ಲಾ ರೀತಿಯ ಒತ್ತಡಗಳನ್ನು ಕಡಿಮೆ ಮಾಡುತ್ತದೆ - ಗೃಹ, ಸಂಚಾರ, ಭೂಮಿ, ಜನಸಂಖ್ಯೆ, ಇತ್ಯಾದಿ.

ಈ. ಬೆಂಗಳೂರಿನ ಆಚೆ ವಾಸಿಸುತ್ತಿರುವ ದೈನಿಕ ಪ್ರಯಾಣಿಕರಿಗೆ ಸಹಕಾರಿಯಾಗಲಿದೆ.

೩. ಹೂಡಿಕೆಯನ್ನು ಕೆಳಕಂಡ ಆಧಾರಗಳಿಂದ ನಿರ್ಧರಿಸಬಹುದು:

ಅ. ಪ್ರಯಾಣಿಕ ರೈಲು ಜಾಲದ ನಿರ್ಮಾಣಕ್ಕೆ ಪ್ರತಿ ಕಿಲೋಮೀಟರಿಗೆ ೧೦-೨೦ ಕೋಟಿ ರೂಪಾಯಿಗಳು ಖರ್ಚಾಗಲಿದ್ದು, ಮೆಟ್ರೋ/ಅತಿ ವೇಗ ರೈಲು ಸಂಚಾರ ವ್ಯವಸ್ಥೆಗೆ ೨೫೦-೪೦೦ ಕೋಟಿ ರೂಪಾಯಿಗಳು ಪ್ರತಿ ಕಿಲೋಮೀಟರಿಗೆ ಖರ್ಚಾಗಲಿದೆ.

ಆ. ೮,೦೦೦ ಕೋಟಿ ರೂಪಾಯಿಗಳ ಹೂಡಿಕೆಯಿಂದ ಪ್ರಯಾಣಿಕ ರೈಲು ೪೦೦ ಕಿಲೋಮೀಟರಿನಷ್ಟು ವ್ಯವಸ್ಥೆ ದೊರೆಯಲಿದ್ದು, ಮೆಟ್ರೋದ ಹೋಲಿಕೆಯಲ್ಲಿ ೧೦೦ ಕಿಲೋ ಮೀಟರ್ ಜಾಲಕ್ಕೆ ೪೦,೦೦೦ ಕೋಟಿ ರೂಪಾಯಿಗಳು ಖರ್ಚಾಗಲಿದೆ.

ಇ. ಮೆಟ್ರೋ ವೆಚ್ಚಕ್ಕೆ ಹೋಲಿಸಿದಲ್ಲಿ ೧/೫ರ ವೆಚ್ಚಕ್ಕೆ ಪ್ರಯಾಣಿಕ ರೈಲಿನಲ್ಲಿ ೪ ಪಟ್ಟು ಜಾಲ ದೊರೆಯಲಿದೆ.

೪. ಸಾಮಾಜಿಕ-ಆರ್ಥಿಕ ಅನುಕೂಲಗಳು ಕೆಳಗಿನಂತಿವೆ:

ಅ. ಪ್ರಯಾಣಿಕರ ರೈಲು ಸೇವೆಯ ಜಾಲವು ಕರ್ನಾಟಕದ ೮ ಲೋಕಸಭಾ ಕ್ಷೇತ್ರದಲ್ಲಿ ಹರಡಿದೆ - ಬೆಂಗಳೂರು ಕೇಂದ್ರ, ದಕ್ಷಿಣ, ಉತ್ತರ, ಗ್ರಾಮಾಂತರ, ಚಿಕ್ಕಬಳ್ಳಾಪುರ, ತುಮಕೂರು, ಮಂಡ್ಯ ಮತ್ತು ಕೋಲಾರ.

ಆ. ಇದು ಕರ್ನಾಟಕದ ೪೭ ವಿಧಾನಸಭೆ ಕ್ಷೇತ್ರಗಳಲ್ಲಿ ಹರಡಿದೆ.

ಇ. ಒಂದು ರೂಪಾಯಿಯ ಹೂಡಿಕೆಯು ಎಂಟು ರೂಪಾಯಿಯ ಆದಾಯ ತರಲಿದೆ.

ಈ. ಪ್ರಯಾಣಿಕ ರೈಲು ಸೇವೆಯಲ್ಲಿನ ಹೂಡಿಕೆಯು ನಗರ ಸಾರಿಗೆಗಾಗಿ ನಿರ್ಮಿಸಬೇಕಾದ ಪರ್ಯಾಯ ಯೋಜನೆಗಳಿಂದ ೧೦-೧೨,೦೦೦ ರೂಪಾಯಿಗಳಷ್ಟು ಉಳಿತಾಯವನ್ನು ಮಾಡಲಿದೆ.

ಉ. ಪ್ರಯಾಣಿಕ ರೈಲು ಸೇವೆಯ ವ್ಯಾಪ್ತಿ ಮತ್ತು ಅನುಕೂಲಗಳು ಬೇರೆ ಯಾವ ಪರ್ಯಾಯ ನಗರ ಸಾರಿಗೆ ಯೋಜನೆಯು ನೀಡಲಾಗದು.

೫. ಪ್ರಯಾಣಿಕ ರೈಲು ಸೇವೆಯಲ್ಲಿನ ಹೂಡಿಕೆಯು ರಾಜ್ಯ ರೈಲು ಬೆಳವಣಿಗೆಯಲ್ಲಿನ ಹೂಡಿಕೆ:

ಅ. ಬೆಂಗಳೂರು ನಗರ ರೈಲು ನಿಲ್ದಾಣದಲ್ಲಿ ಈಗಿನ ೬೦ ರಿಂದ ೧೫೦ ರೈಲುಗಳು ನಿಲ್ಲಲು ಅನುಕೂಲ ಮತ್ತು ಈಗಿನ ೧೦ ರಿಂದ ೧೫ ಪ್ಲಾಟ್‌ಫಾರ್ಮ್‌ಗಳ ನಿರ್ಮಾಣವಾಗುವುದು.

ಆ. ಯಶವಂತಪುರ ನಿಲ್ದಾಣದಲ್ಲಿ ಈಗಿನ ೩೭ ರಿಂದ ೬೦ ರೈಲು ನಿಲ್ಲಲು ಅವಕಾಶ.

ಇ. ಬೈಯಪ್ಪನಹಳ್ಳಿ ನಿಲ್ದಾಣದಲ್ಲಿ ೬೦ ಹೊಸ ರೈಲು ನಿಲ್ಲಲು ಮತ್ತು ೫ ಹೊಸ ಪ್ಲಾಟ್‌ಫಾರ್ಮ್‌ಗಳು ಮತ್ತು ರಿಪೇರಿ ಮತ್ತು ನಿರ್ವಹಣೆಯ ವ್ಯವಸ್ಥೆ ಸಾಧ್ಯ.

ಈ. ತ್ವರಿತಗತಿಯಲ್ಲಿ ಕಡಿಮೆ ಖರ್ಚಿನಲ್ಲಿ ನಗರಕ್ಕೆ ರೈತರ, ಕಾರ್ಖಾನೆಗಳ, ಸರಕು ಸಾಗಣೆ ವ್ಯವಸ್ಥೆಯಾಗುತ್ತದೆ.

೬. ಸಮಾಜದ ಎಲ್ಲಾ ವರ್ಗಗಳನ್ನೂ ತಲುಪುವ ಈ ಯೋಜನೆ ಒಂದು ಉತ್ತಮ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಲಿದೆ. ಆರ್ಥಿಕವಾಗಿ ಹಿಂದುಳಿದ ಬೆಂಗಳೂರು ಮತ್ತು ಸುತ್ತಮುತ್ತಲಿನ ಪಟ್ಟಣಗಳ ಜನರಿಗೆ ಬೆಂಗಳೂರಿಗೆ ವಿದ್ಯಾ ಸಂಸ್ಥೆಗಳಿಗೆ, ಆರೋಗ್ಯ ಕೇಂದ್ರಗಳಿಗೆ, ಕಾರ್ಖಾನೆಗಳಿಗೆ, ವಾಣಿಜ್ಯ ಮತ್ತು ಮಾರುಕಟ್ಟೆ ಕೇಂದ್ರಗಳಿಗೆ, ಆಟ ಮತ್ತು ಮನೋರಂಜನಾ ಕೇಂದ್ರಗಳಿಗೆ ಬಂದು ಹೋಗಲು ಸಂಪರ್ಕ ಕಲ್ಪಿಸಲಿದೆ.

## ಮಾರ್ಗಸೂಚಿ

ಕೂಡಲೇ ವಿಶೇಷ ಕಾರ್ಯನಿರ್ವಾಹಕ ವಾಹನವನ್ನು ಸ್ಥಾಪಿಸಿ, ಪ್ರಯಾಣಿಕ ರೈಲು ಸೇವೆ ಯೋಜನೆ ಮತ್ತು ಸೇವೆಗಳನ್ನು ಪ್ರಾರಂಭಿಸಬೇಕು.

ವಿಶೇಷ ಕಾರ್ಯನಿರ್ವಾಹಕ ವಾಹನವು ಕೆಳಕಂಡ ಯೋಜನೆಗಳನ್ನು ಕೈಗೆತ್ತುಕೊಳ್ಳುವಂತೆ ನಿರ್ದೇಶನ ನೀಡಬೇಕು:

ಅ. ಎಲ್ಲಾ ಮಾರ್ಗ ಮತ್ತು ವಿಭಾಗಗಳ ಸರ್ವೇ ಕಾರ್ಯ ಕೈಗೆತ್ತಿಕೊಳ್ಳಬೇಕು.

ಆ. ವಿಸ್ತೃತ ಯೋಜನಾ ವರದಿ (ಡಿ ಪಿ ಆರ್) ಅನ್ನು ತಯಾರಿಸಬೇಕು.

ಇ. ಹಣಕಾಸು ವ್ಯವಸ್ಥೆಯನ್ನು ಅಂತಿಮಗೊಳಿಸಬೇಕು

ಈ. ಯೋಜನಾ ಹಂತಗಳನ್ನು ಗುರುತಿಸಬೇಕು - ಹಂತ ೧, ೨ ಮತ್ತು ೩

ಕ. ಹಂತ ೧ - ಕೂಡಲೇ ಪ್ರಯಾಣಿಕ ರೈಲು ಸೇವೆಗಳನ್ನು ಈಗಿರುವ ವ್ಯವಸ್ಥೆಯೊಂದಿಗೆ ಕಡಿಮೆ ವೆಚ್ಚದಲ್ಲಿ ಪ್ರಾರಂಭಿಸಬೇಕು.

ಖ. ಹಂತ ೨ - ಪ್ರಯಾಣಿಕ ರೈಲು ಸೇವೆ ಯೋಜನೆಯನ್ನು ಸಂಪೂರ್ಣವಾಗಿ ಕಾರ್ಯರೂಪಕ್ಕೆ ತರಬೇಕು

ಗ. ಹಂತ ೩ - ಮುಂದಿನ ವಿಸ್ತರಣೆ ಮತ್ತು ತಾಂತ್ರಿಕ ಆವಿಷ್ಕಾರಗಳ ಅಳವಡಿಕೆ ಮಾಡಬೇಕು

ಉ. ಕೇಂದ್ರ ಸರ್ಕಾರ ಮತ್ತು ರೈಲ್ವೆ ಮಂತ್ರಾಲಯಕ್ಕೆ ಪ್ರಮಾಣ ಮತ್ತು ಒಪ್ಪಿಗೆಗೆ ಕಳುಹಿಸಬೇಕು.

೩. ಹಂತ ೧ ಮತ್ತು ೨ ವಿಶೇಷ ಕಾರ್ಯನಿರ್ವಾಹಕ ವಾಹನದ ಮುಖಾಂತರ ಜಾರಿಗೊಳಿಸಬೇಕು.

ಈ ಒಂದು ಮಹತ್ತರ ಯೋಜನೆಯು ನಿಮ್ಮ ಸಕ್ರಿಯ ಭಾಗವಹಿಸುವಿಕೆ ಮತ್ತು ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಹಕಾರದಿಂದಲ್ಲದೇ ಮಾಡಲು ಸಾಧ್ಯವಿಲ್ಲ. ನಿಮ್ಮ ಸಕ್ರಿಯ ಭಾಗವಹಿಸುವಿಕೆಯಿಂದ, ಉಪನಗರ ರೈಲು ವ್ಯವಸ್ಥೆಯು ಬೆಂಗಳೂರಿನಲ್ಲಿ ಕಾರ್ಯರೂಪಕ್ಕೆ

ಬರುವುದೆಂದು ನಾವು ನಂಬಿದ್ದೇವೆ.  ಉಪನಗರ ರೈಲಿಗೆ ಹೂಡುವ ಹಣದಿಂದ ಬರುವ ಆದಾಯ ಮತ್ತು ಅದು ತರುವ ಬದಲಾವಣೆ ಅಗಾಧ.  ನೀವು ಈ ಯೋಜನಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಬೇಕೆಂದು ಈ ಮೂಲಕ ಕೋರುತ್ತೇವೆ.

ಈ ಯೋಜನೆ ಕುರಿತಾಗಿ ನಿಮಗೆ ಅಥವಾ ನಿಮ್ಮ ಅಧಿಕಾರಿಗಳಿಗೆ ಯಾವುದೇ ಪ್ರಶ್ನೆಗಳಿದ್ದರೆ ದಯವಿಟ್ಟು ನನ್ನನ್ನು ಸಂಪರ್ಕಿಸಿ.

ಧನ್ಯವಾದ,

ನಿಮ್ಮ ವಿಶ್ವಾಸಿ,

ದೂರವಾಣಿ:  (ಅಲೆಯುಲಿ)